ಚನ್ನಪಟ್ಟಣಕ್ಕೆ ಕಾವೇರಿ ನೀರಿನ ಯೋಜನೆ ಜಾರಿ ಕುರಿತು

44-ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚನ್ನಪಟ್ಟಣಕ್ಕೆ ಕಾವೇರಿ ನೀರು ಸರಬರಾಜು ಯೋಜನೆಯನ್ನು ತರುವ ಪ್ರಸ್ತಾವನೆಯು ಮೂರು ವರ್ಷಗಳಿಂದ ವಿಳಂಬವಾಗಿದೆಯೇ?

ಆ) ಮಾನ್ಯ ಮುಖ್ಯಮಂತ್ರಿಗಳ ಆದೇಶದಂತೆ ಈ ಪ್ರಸ್ತಾವನೆಯನ್ನು ಸಚಿವ ಸಂಪುಟದ ಮುಂದೆ ಅನುಮೋದನೆಗಾಗಿ ಇಡುವುದು ನಿಜವೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮವೇನು?

ಈ) ಈ ಕೆಲಸವನ್ನು 1993-94ನೇ ಸಾಲಿನಲ್ಲಾದರೂ ತೆಗೆದುಕೊಳ್ಳಲಾಗುವುದೇ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಚನ್ನಪಟ್ಟಣಕ್ಕೆ ಕಾವೇರಿ ನದಿಯಿಂದ ನೀರು ಸರಬರಾಜು ಮಾಡುವ ಯೋಜನೆಯ ರೇಖಾ ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ತಯಾರಿಸುವ ಕಾರ್ಯ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಪರಿಶೀಲನೆಯಲ್ಲಿದೆ.

ಈ) ಸರ್ಕಾರದಲ್ಲಿ ಪ್ರಸ್ತಾವನೆ ಸ್ವೀಕೃತಿಗೊಂಡ ನಂತರ ಪರಿಶೀಲಿಸಲಾಗುವುದು.

ಶ್ರೀಸಾದತ್ ಆಲಿಖಾನ್: ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಮಾಹಿತಿ ಕೊಟ್ಟಿದ್ದಾರೆ. ಆದರೆ, It is a scrap of paper containing false information. ಸುಳ್ಳು ಮಾಹಿತಿ ಕೊಟ್ಟಿದ್ದಾರೆ. ಕಾವೇರಿ ಪ್ರಪೋಸಲ್ಲೇ ಇಲ್ಲ ಎಂದರೆ ಹೇಗೆ? 1990ರಿಂದ ಪ್ರಪೋಸಲ್ ಇದೆ, 1990ನೇ ಇಸವಿಯಲ್ಲಿ ಫೀಜಿಬಿಲಿಟಿ ರಿಪೋರ್ಟ್ ಅನ್ನು ವೀರೇಂದ್ರ ಪಾಟೀಲರು ತರಿಸಿದ್ದರು. ಒಂಭತ್ತೂವರೆ ಕೋಟಿ ಎಂದು ತಮಗೂ ಗೊತ್ತು; ತಾವು ತಮ್ಮ ಸ್ವೀಚ್ಛೆಯಲ್ಲಿ ಹೇಳಿದ್ದೀರಿ. 1990-91ನೇ ಇಸವಿಗೆ ಸಚಿವ ಸಂಪುಟಕ್ಕೆ ತರುತ್ತೇವೆಂದು ಹೇಳಿರುವುದೂ ಇದೆ. ಈಗ ನಾಲ್ಕು ಸಾರಿ ನೀವು ಫಿಜಿಬಿಲಿಟಿ ರಿಪೋರ್ಟ್ ಅನ್ನು ಫ್ರೆಷ್ ಆಗಿ ಮಾಡಿ ಎಂದಿದ್ದೀರಿ. ಏಕೆಂದರೆ ಎಸ್ಟಿಮೇಟ್ ಜಾಸ್ತಿಯಾಗಿದೆ ಎಂದು ಹೇಳಿದ್ದೀರಿ. ಮತ್ತೆ ಇಲ್ಲಿ ಮಾಹಿತಿ ಕೊಡುವಾಗ ಪ್ರಸ್ತಾವನೆಯೇ ಇಲ್ಲವೆಂದು ಹೇಳಿದರೆ, ನಾವು ಏಕೆ ಈ ಪ್ರಶ್ನೆ ಕೇಳಬೇಕೆಂದು ಗೊತ್ತಾಗುತ್ತಾ ಇಲ್ಲ.

ಶ್ರೀ ಚೌಡರೆಡ್ಡಿ : ಮಾನ್ಯ ಅಧ್ಯಕ್ಷರೇ, ನಮ್ಮ ಸದಸ್ಯರು ಕೇಳುತ್ತಾ ಇರುವುದು ಅನೇಕ ಸಲ ನನ್ನ ಹತ್ತಿರವೂ ಬಂದಿದೆ. ಇಲ್ಲಿ ಏನಾಗಿದೆ ಎಂದರೆ, ಅವರು ಕಾವೇರಿ ನೀರನ್ನು ಕೇಳುತ್ತಿದ್ದಾರೆ. ಸುಮಾರು 40 ಕಿಲೋಮೀಟರ್ಸ್‌ನಿಂದ ನಾವು ಚನ್ನಪಟ್ಟಣಕ್ಕೆ ತೆಗೆದು ಕೊಂಡು ಹೋಗಬೇಕಾಗುತ್ತದೆ. ಅರ್ಬನ್ ವಾಟರ್ ಸಪ್ಲೈ ಬೋರ್ಡಿನವರು ಹದಿನಾಲ್ಕುವರೆ ಕೋಟಿ ರೂಪಾಯಿಗಳ ಎಸ್ಟಿಮೇಟ್ ಮಾಡಿದ್ದಾರೆ. ಈ ಮಧ್ಯೆ ಏನಾಗಿದೆ ಎಂದರೆ, ನಾನು ಆ ಮೀಟಿಂಗ್‌ಗೆ ಹೋಗಿರಲಿಲ್ಲ. 19-11-93ರಲ್ಲಿ ಸನ್ಮಾನ್ಯ ಸದಸ್ಯರು, ಮತ್ತು ನಮ್ಮ ಅರ್ಬನ್ ವಾಟರ್ ಸಪ್ಲೈ ಬೋರ್ಡಿನವರು, ಬೆಂಗಳೂರು ಬಿ.ಡಬ್ಲ್ಯೂ.ಎಸ್.ಎಸ್.ಬಿ. ನವರೆಲ್ಲ ಸೇರಿ ಚರ್ಚಿಸಿದ್ದಾರೆ. ಅಲ್ಲಿ ಏನಾಗಿದೆ ಎಂದರೆ, ತಾತಗುಣಿ ಹತ್ತಿರ ಏನು ಫಿಲ್ಟರ್ ಪಿಟ್ಸ್ ಸೇರಿದೆ. ಅದನ್ನು ವಾಷ್ ಮಾಡುವಾಗ, 5 ಎಂ ಜಿ ಡಿ ವಾಟರ್ನ್ನು ಪ್ರತಿದಿನ ವಾಷ್ ಮಾಡಿ ಆಚೆಗೆ ಬಿಡುತ್ತಾರೆ. ಇನ್ನು ಏನಾದರೂ ಪುನಃ ಫಿಲ್ಟರ್ ಮಾಡಿ, ಚನ್ನಪಟ್ಟಣಕ್ಕೆ ಕೊಡುವುದಕ್ಕಾಗುತ್ತದೆಯೇ ಎಂಬುದನ್ನು ನೀವು ಚರ್ಚೆ ಮಾಡಿದರಂತೆ. ನಾನು ಅವತ್ತು

ಬಂದಿರಲಿಲ್ಲ. ಈ ವಿಷಯವನ್ನು ನಾವು ಎಕ್ಸಾಮಿನ್ ಮಾಡುತ್ತಾ ಇದ್ದೇವೆ. ಅವರಿಗಿಂತ ನನಗೆ ಚನ್ನಪಟ್ಟಣಕ್ಕೆ ಚನ್ನಪಟ್ಟಣಕ್ಕೆ ನೀರು ಕೊಡಬೇಕೆಂದು ಕಳಕಳಿ ಇದೆ, ಏಕೆಂದರೆ, ಇದು ನಮ್ಮ ಲಿಸ್ಟಲ್ಲಿ ಸೇರಿಸಿಕೊಂಡಿದ್ದೆ. ನಮ್ಮ ಮೆಗಾಸಿಟಿಯಲ್ಲಿ, ಬೆಂಗಳೂರಿನಲ್ಲಿರತಕ್ಕ ಆಕರ್ಷಣೆಯನ್ನು ತಪ್ಪಿಸುವುದಕ್ಕಾಗಿ, ಅಲ್ಲಿ ನಾವು ಡೆವಲಪ್‌ಮೆಂಟ್ ಮಾಡುತ್ತಿದ್ದೇವೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಾದತ್ ಅಲಿಖಾನ್ : ಮಾನ್ಯ ಅಧ್ಯಕ್ಷರೇ, ಪ್ರಸ್ತಾವನೆಯೇ ಇಲ್ಲ ಎಂದು ಅವರ ಉತ್ತರದಲ್ಲಿ ಹೇಳಿದ್ದಾರೆ. ಹಿಂದೆ, ಈ ಪ್ರಶ್ನೆ ಕೇಳಿದಾಗ, ಪ್ರಸ್ತಾವನೆ ಇದೆ ಎಂದು ಅವರೇ ಹೇಳಿದ್ದಾರೆ. ಅದನ್ನು ಅವರು ರೆಫರ್ ಮಾಡಲಿ. ಇನ್ನೊಂದು ಚನ್ನಪಟ್ಟಣದಲ್ಲಿ ಏನಾಗಿದೆ ಎಂದರೆ, ಕುಡಿಯುವ ನೀರಿನ 101 ಬೋರ್‌ವೆಲ್ಸ್ ಇದೆ.

ಅದರಲ್ಲಿ 40 ಬೋರ್‌ವೆಲ್ಸ್ ಡ್ರೈ ಆಗಿದೆ. ಮೊದಲು 150-200 ಅಡಿ ಆಳ ಇತ್ತು. ಈಗ ಹೋಗುತ್ತಾ ಹೋಗುತ್ತಾ 400 ರಿಂದ 500 ಅಡಿ ಆಳ ಹೋಗಿದೆ. ಅದು ಬಿಟ್ಟರೆ ನಮಗೆ ಬೇರೆ ಮಾರ್ಗವೇ ಇಲ್ಲ. ನೀರಿಗೆ ಅಲ್ಟರ್ನೇಟೀವ್ ಇಲ್ಲ. ಈಗ ನೀವು ಏನಾದರೂ ಕಾವೇರಿ ನೀರು ಕೊಡಲಿಲ್ಲ ಅಂದ್ರೆ ಮೆಗಾಸಿಟಿ ಮಾಡಿ ಏನು ಮಾಡುತ್ತೀರಿ. ಅದಕ್ಕೆ ಮೆಗಾಸಿಟಿ ಮಾಡುವುದಕ್ಕಿಂತ ಮುಂಚೆ ತಾವು ಈ ಕಾವೇರಿ ವಾಟರ್ ಮೊದಲು ಸ್ಯಾಂಕ್ಷನ್ ಮಾಡಿ. ಕ್ಯಾಬಿನೆಟ್ ಮುಂದೆ ತರಬೇಕೆಂದು ಚೀಫ್ ಮಿನಿಸ್ಟರ್ 4 ಸಾರಿ ಬರೆದಿದ್ದಾರೆ ಎಂದು ತಾವು ಹೇಳಿದಿರಿ. ಆದರೂ ಪ್ರೊಪೋಜಲ್ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ, ಅದಕ್ಕೆ ತಾವು ಯಾವಾಗ ತೆಗೆದುಕೊಳ್ಳುತ್ತೀರಾ ಎಂದು ಸ್ವಲ್ಪ ಹೇಳಿ.

ಶ್ರೀ ಚೌಡರೆಡ್ಡಿ : ಮಾನ್ಯ ಅಧ್ಯಕ್ಷರೇ, ಅಧಿಕೃತವಾಗಿ ಪ್ರೊಪೋಜಲ್ ಆಗುವವರೆಗೂ ನಾವು ಹೇಳುವ ಹಾಗೆ ಇಲ್ಲ. ಅದನ್ನು ಪರಿಶೀಲನೆ ಮಾಡದೆ, ಏನೊಂದು ಕ್ರಮ ತೆಗೆದುಕೊಳ್ಳದೆ, ಪೂರ್ತಿ ಒಂದು ತೀರ್ಮಾನ ಮಾಡದೆ ಪ್ರೊಪೋಜಲ್ ಇದೆ ಎಂದು ಹೇಗೆ ನಾನು ಹೇಳುವುದಕ್ಕೆ ಆಗುತ್ತದೆ? ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಆರಮನೆ ರಸ್ತೆಯಲ್ಲಿರುವ ರೈಲು ಸೇತುವೆ ಕುರಿತು

158-ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರಮನೆ ರಸ್ತೆಯಲ್ಲಿ ಕುಮಾರ ಪಾರ್ಕ್ ಪಶ್ಚಿಮ ಮತ್ತು ಪ್ಯಾಲೇಸ್ ಗುಟ್ಟಹಳ್ಳಿ ಕಡೆಗೆ ಹೋಗುವ ರಸ್ತೆ ಹೊಸದಾಗಿ ನಿರ್ಮಿಸುತ್ತಿರುವ ರಸ್ತೆಯನ್ನು ಅಪೂರ್ಣವಾಗಿರುವುದರಿಂದ ಸಾರ್ವಜನಿಕರಿಗೆ ಸಾಕಷ್ಟು ಅನಾನುಕೂಲ ಉಂಟು ಮಾಡುವುದಲ್ಲದೆ ಆರ್ಥಿಕ ಮತ್ತು ಸಮಯದ ನಷ್ಟಗೈಯ್ಯುತ್ತಿದ್ದು ಅದನ್ನು ಏಕೆ ಪೂರ್ಣಗೊಳಿಸಲಾಗಿಲ್ಲ?

ಆ) ಯೋಚನೆಯಿಲ್ಲದೇ ಯೋಜನೆ ರೂಪಿಸಲು ಈ ರಸ್ತೆ ಕೆಲಸಕ್ಕೆಗೊಳ್ಳಲು ಕಾರಣರಾದ ವ್ಯಕ್ತಿಗಳಾರು? ಈ ಕಾರ್ಯಕ್ಕೆ ಅಂದಾಜು ಮಾಡಿದ ಮೊತ್ತವೆಷ್ಟು? ಅಗತ್ಯ ಭೂಮಿಯ ಭೂಸ್ವಾಧೀನ ಕ್ರಮವನ್ನು ಕ್ರಮಬದ್ಧವಾಗಿ ಕೈಗೆತ್ತಿಕೊಳ್ಳದೇ ಇರುವಾಗ ಈ ರಸ್ತೆ ನಿರ್ಮಾಣಕ್ಕಾಗಿ ಖರ್ಚು ಮಾಡಿದ ಮೊತ್ತವೆಷ್ಟು?

ಇ) ಈ ರಸ್ತೆ ಪೂರ್ಣಗೊಳಿಸಲು ಈ ಕೆಳಕಂಡವುಗಳಿಗಾಗಿ ಅಂದಾಜು ಮಾಡಿದ ವೆಚ್ಚವೆಷ್ಟು?

1) ಭೂ ಸ್ವಾಧೀನ
2) ರಸ್ತೆ ನಿರ್ಮಾಣ